ಜಾಣರ ಪೆಟ್ಟಿಗೆ

## ಉತ್ತಮ ಧಾರಾವಾಹಿ

'ಸುವರ್ಣ' ಕನ್ನಡ ವಾಹಿನಿಯಲ್ಲಿ ಪ್ರತಿ ದಿನ ಸಂಜೆ 6–30ಕ್ಕೆ (ಸೋಮವಾರದಿಂದ ಶನಿವಾರ) ಪ್ರಸಾರವಾಗುತ್ತಿರುವ 'ಗುಂಡ್ಯಾನ ಹೆಂಡ್ತಿ' ಧಾರಾವಾಹಿ, ಉತ್ತರ ಕರ್ನಾಟಕದ ಸೊಗಡು ಭಾಷೆಯನ್ನು ಉಣಬಡಿಸುತ್ತದೆ. ಧಾರಾವಾಹಿಯಲ್ಲಿ ಮಾಮೂಲಿ ಮಸಾಲೆ ಅಂಶಗಳಿದ್ದರೂ ಕಥಾ ಹಂದರದಲ್ಲಿ ಬಿಗಿ ಇದೆ. ವಿಭಿನ್ನವಾಗಿಯೂ ನಿರೂಪಿಸಲ್ಪಟ್ಟಿದೆ. ದೇಸಾಯಿ ಮನೆತನದ ಕುಡಿ ಹರಿ ದೇಸಾಯಿ ದೇಶದಲ್ಲಿ ಬ್ಯಾಂಕುಗಳಲ್ಲಿ ಕೋಟ್ಯಂತರ ರೂಪಾಯಿ ಸಾಲ ಮಾಡಿ ಅದನ್ನು ತೀರಿಸದೆ ಪಲಾಯನ ಮಾಡಿದ ವ್ಯಕ್ತಿಗಳನ್ನು ಉದಾಹರಿಸುತ್ತಾ ಕೇವಲ ಕೆಲವೇ ಲಕ್ಷಗಳ ಸಾಲವನ್ನು ತೀರಿಸಲು ಸಾಧ್ಯವಾಗದೆ ಆತ್ಮಹತ್ಯೆ ಮಾಡಿಕೊಳ್ಳುವ ರೈತರ ಬಗ್ಗೆ ಹೇಳುವುದು ಪ್ರಸ್ತುತ ಪರಿಸ್ಥಿತಿಗೆ ಹಿಡಿದ ಕೈಗನ್ನಡಿಯಂತಿದೆ.

—ಸುಂದರ್, ಬೆಂಗಳೂರು

## ಮನತಣಿಸುವ ಮಕ್ಕಳು

ಮನಸ್ಸಿಗೆ ಮುದ ನೀಡುವಂತಹ ಕಾರ್ಯಕ್ರಮಗಳನ್ನು ನೀಡುವುದಕ್ಕಾಗಿ ಝೀ ಕನ್ನಡ ವಾಹಿನಿಗೆ ತುಂಬಾ ಧನ್ಯವಾದಗಳು. ಚೋಟಾ ಚಾಂಪಿಯನ್, ವೀಕೆಂಡ್ ವಿತ್ ರಮೇಶ್, ಒಗ್ಗರಣೆ ಡಬ್ಬಿ... ಕೆಲವು ಸೂಪರ್ ಧಾರಾವಾಹಿಗಳೊಂದಿಗೆ ಸರಿಗಮಪ, ಡ್ರಾಮಾ ಜೂನಿಯರ್ಸ್, ಡಾನ್ಸ್ ಕರ್ನಾಟಕ ಡಾನ್ಸ್ ಮೊದಲಾದ ಒಳ್ಳೆಯ ಕಾರ್ಯಕ್ರಮಗಳು ಬರುತ್ತಿವೆ.

—ಅಂಬಿಕಾ ಮಂಜುನಾಥಸ್ವಾಮಿ, ಭದ್ರಾವತಿ

## ಧರ್ಮ ಪ್ರವಚನ

ಪ್ರತಿದಿನ ಬೆಳಿಗ್ಗೆ 6.30 ರಿಂದ 7ರ ಅವಧಿಯಲ್ಲಿ ಸುವರ್ಣ ವಾಹಿನಿಯಲ್ಲಿ ಪ್ರಸಾರವಾಗುವ 'ಧರ್ಮ ಯಾವುದಯ್ಯಾ...?' ಎಂಬ ಪ್ರವಚನ ಕಾರ್ಯಕ್ರಮ ತುಂಬಾ ಚೆನ್ನಾಗಿ ಮೂಡಿಬರುತ್ತಿದೆ. ಇಂತಹ ಪ್ರವಚನವನ್ನು ಬೆಳಗಿನ ಸಮಯದಲ್ಲಿ ಕೇಳುವುದರಿಂದ ಮನಸ್ಸಿನ ದುಃಖ – ದುಮ್ಮಾನಗಳು ದೂರವಾಗಿ, ಆ ದಿನವನ್ನು ಹೊಸ ಚಿಂತನೆಯೊಂದಿಗೆ ಪ್ರಾರಂಭಿಸಲು ಪ್ರೇರೇಪಿಸಿದಂತಾಗುತ್ತದೆ. ಅಲ್ಲದೆ ಮನಸ್ಸಿನಲ್ಲಿ ಹೊಸ ಆಲೋಚನೆ ಮೊಳೆತು, ಆ ದಿನವನ್ನು ಸಕಾರಾತ್ಮಕವಾಗಿ ನೋಡಲು ಸಹಾಯಕವಾಗುತ್ತದೆ. ಇಂತಹ ಕಾರ್ಯಕ್ರಮಗಳು ಪ್ರತಿಯೊಂದು ವಾಹಿನಿಯಲ್ಲೂ ಮೂಡಿಬಂದರೆ ಎಷ್ಟು ಚೆನ್ನ ಅಲ್ಲವೇ...?

—ಎಂ. ಜಿ. ರಾಮಚಂದ್ರ, ಮಂಡಗಳಲೆ, ಸಾಗರ

ವಾರದ ಪತ್ರ

## ರುಚಿ ನೋಡಬಂದ ಅತಿಥಿ!

ತಿನ್ನುವ ಆಹಾರದಷ್ಟೇ ಅದು ತಯಾರಾಗುವ ಜಾಗವೂ ಅಷ್ಟೇ ಶುಚಿಯಾಗಿರಬೇಕು ಎಂದು ಎಲ್ಲರೂ ಬಯಸುವುದು ಸಹಜ. ತಯಾರಿಸುವವ ಪರಿಶುದ್ಧನಾಗಿರುವುದರ ಜೊತೆಗೆ ಅವನ ಪರಿಕರ, ಪರಿಸರವೂ ಚೊಕ್ಕವಾಗಿರಬೇಕು. ಆದರೆ ಇಲ್ಲೊಂದು ಆಭಾಸ ತೂರಿಬಂದಿದ್ದು ಅಡುಗೆ ಕಾರ್ಯಕ್ರಮದಲ್ಲಿ.

ನಿರೂಪಕರ ಹಿಂದೆ ಇಲಿಯೊಂದು ಅತ್ತಿಂದಿತ್ತ ಓಡಾಡುತ್ತಿತ್ತು. ಕ್ಯಾಮೆರಾದ ಎದುರು ಸ್ಪಷ್ಟವಾಗಿ ಬಂದರೂ ಮರುಸಂಯೋಜನೆಗೊಳ್ಳದೆ ಪ್ರಸಾರವಾಗಿದ್ದು ಚೋದ್ಯವೆನಿಸಿತು. ಅಂತೂ ಇಲಿಗೆ ಟಿವಿಯಲ್ಲಿ ರುಚಿ ನೋಡುವ ಭಾಗ್ಯ! ಇದು ಪ್ರಸಾರವಾಗಿದ್ದು ಜೂನ್ 13ರಂದು ಝೀ ಕನ್ನಡದ 'ಒಗ್ಗರಣೆ ಡಬ್ಬಿ'ಯ ಕೊನೆಯ ಭಾಗದಲ್ಲಿ. ಇನ್ನು ಮುಂದೆ ಇಂತಹ ಮುಜುಗರ ಆಗದಂತೆ ಗಮನವಹಿಸಬೇಕು.

ಶ್ರೀರಂಜನಿ ಬೆಂಗಳೂರು

## ಅತ್ಯುನ್ನತ ಪ್ರಶಸ್ತಿ ಕೊಡಬೇಕು!

ಕೋಟ್ಯಂತರ ಕನ್ನಡ ವೀಕ್ಷಕರ ಮೆದುಳಿಗೆ ಕೈ ಹಾಕುವ 'ಲಕ್ಷ್ಮಿಬಾರಮ್ಮ'ದ ಲಚ್ಚಿ ಹಾಗೂ 'ಅಗ್ನಿ ಸಾಕ್ಷಿ'ಯ ಸನ್ನಿಧಿ ಈ ಇಬ್ಬರಿಗೆ ಭಾರತದ ಅತ್ಯುನ್ನತ ಪ್ರಶಸ್ತಿ ಸೃಷ್ಟಿಸಿ ನೀಡಿದರೆ ಕನ್ನಡ ಕಲರ್ಸ್ ವಾಹಿನಿಯ ಜನ್ಮ ಸಾರ್ಥಕವಾಗಬಹುದು. ಒಬ್ಬರು ಇನ್ನೊಬ್ಬರನ್ನು ಮೀರಿಸುವಂತ ಅಮಾಯಕ ದಡ್ಡ ಶಿಖಾಮಣಿಗಳು ಎಂದರೆ ತಪ್ಪಾಗಲಾರದು. ಆದಷ್ಟು ಬೇಗ ಈ ಎರಡು ಧಾರಾವಾಹಿಗಳು ಮುಗಿದು ಮತ್ತೊಂದಕ್ಕೆ ಅವಕಾಶ ಕೊಟ್ಟರೆ ವೀಕ್ಷಕರಿಗೂ ನೆಮ್ಮದಿ.

ಎನ್.ಎಸ್.ಚಂದ್ರಶೇಖರ್, ಬೆಂಗಳೂರು

## ಭರ್ಜರಿ 'ಮಹಾಭಾರತ'

ಉದಯದ 'ಮಹಾಭಾರತ' ಚೆನ್ನಾಗಿದೆ. ಮಹಾಭಾರತದ ಪಾತ್ರಧಾರಿ ಕೃಷ್ಣನಾಗಿ ವಲ್ಲಭಸೂರಿ ಹಾಗೂ ಅರ್ಜುನನ ಪಾತ್ರದಲ್ಲಿ ಅಂಬರೀಷ್ ನಾರಂಗಿ ಅವರ ಅಭಿನಯ ಸಮರ್ಪಕವಾಗಿದೆ. ನಾರದ, ಯುಧಿಷ್ಠಿರ, ದ್ರೌಪದಿ, ಸುಭದ್ರೆ ಮತ್ತು ಉಳಿದ ಪಾಂಡವರ ನಟನೆ ಪರವಾಗಿಲ್ಲ. ಕುಂತಿ ಪಾತ್ರಧಾರಿ ಬಹಳ ಸೌಮ್ಯವಾಗಿ ಸಂಭಾಷಣೆ ಒಪ್ಪಿಸಿದ್ದಾರೆ. ಭೀಮನ ಪಾತ್ರದಲ್ಲಿ ನಟಿಸಿರುವ ಕಲಾವಿದ ಆಕಾರಕ್ಕೆ ತಕ್ಕಂತೆ ನಟಿಸಿದ್ದಾರೆ.

ಹಾಗೆಯೇ ಕೌರವರ ಪಾಳಯದಲ್ಲಿ ಧೃತರಾಷ್ಟ್ರ, ಗಾಂಧಾರಿ, ದುರ್ಯೋಧನ, ಕರ್ಣ, ಶಕುನಿ, ವಿದುರ ಪಾತ್ರಧಾರಿಗಳು ಅದ್ಭುತವಾಗಿ ಅಭಿನಯಿಸಿದ್ದಾರೆ. ಆದರೆ ಭೀಷ್ಮನ ನಟನೆ ಸ್ವಲ್ಪ ನಾಟಕೀಯ ಎನಿಸುತ್ತದೆ. ಮಹಾಭಾರತ ಭರ್ಜರಿಯಾಗಿ ಮೂಡಿಬರುತ್ತದೆ.

ಎಸ್. ವಿ. ಶ್ರೀನಿವಾಸ್, ಮೈಸೂರು

## ಮಿನಿಟ್‌ನ ಸೊಗಸು

ಸೂಪರ್ ಮಿನಿಟ್ ಗೇಮ್ ಶೋ ಮನೆಯ ಸದಸ್ಯರೆಲ್ಲ, ಹಿರಿಯರೂ, ಕಿರಿಯರೂ ಒಡಗೂಡಿ ನೋಡುವಂತಹ ಶೋ. ಇನ್ನಷ್ಟು ಮತ್ತಷ್ಟು ಬರಲಿ. ನಟ ಗಣೇಶ್‌ರವರ ನಿರೂಪಣೆ, ಆಟಗಾರರನ್ನು ಪರಿಚಯಿಸುವ ರೀತಿ, ಆಟಗಾರ ಸೋತಾಗ ಸಾಂತ್ವನದ ಮಾತಾಡಿ ಧೈರ್ಯ ತುಂಬುವ ಪರಿ ಮನೋಜ್ಞವಾಗಿದೆ.

ಮಧುರ ಸುಬ್ರಹ್ಮಣ್ಯ, ಬೆಂಗಳೂರು

## ಎರಡು ತಲೆ ಹಾವು

ಕಲರ್ಸ್‌ನ 'ಪುಟ್ಟ ಗೌರಿ ಮದುವೆ' ಧಾರಾವಾಹಿಯ ಗೌರಿ ಇತ್ತೀಚೆಗೆ ಯಾಕೋ ಎರಡು ತಲೆ ಹಾವಿನಂತೆ ಆಡಲು ಶುರು ಮಾಡಿದ್ದಾಳೆ. ಅಜ್ಜಮ್ಮ, ಅಮ್ಮ ಅವರ ಸಾವಿಗೆ ತಾನು ಹೇಳುವ ಸತ್ಯ ಎಲ್ಲಿ ಕಾರಣವಾಗುತ್ತದೋ ಎಂದು ಸತ್ಯ ಹೇಳದೆ, ಪಾಪದ ಹುಡುಗಿ ಹಿಮಾಳ ಭಾವನೆಗಳ ಜೊತೆ ಆಟವಾಡುತ್ತಿದ್ದಾಳೆ.

ಕೆ.ಸರೋಜಿನ, ಬೆಂಗಳೂರು, ಶ್ರೀನಾಥ್ ಕೊನೇಟಿ

## ಡ್ರಾಮಾ.. ಡ್ರಾಮಾ..

ಝೀನ ಡ್ರಾಮಾ ಜೂನಿಯರ್ಸ್‌ನ ತೀರ್ಪುಗಾರರಲ್ಲಿ ನನ್ನ ಒಂದು ವಿನಂತಿ. ಎಲ್ಲ ಮಕ್ಕಳನ್ನೂ ಫೈನಲ್‌ವರೆಗೆ ಕರೆದುಕೊಂಡು ಹೋಗಲು ಸಾಧ್ಯವಿಲ್ಲ. ಅಚಿಂತ್ಯ ಮತ್ತು ನಿಹಾಲ್‌ನನ್ನು ಎಲಿಮಿನೇಟ್ ಮಾಡಿದರೂ ಅವರಿಗೆ ಆ್ಯಕ್ಟ್ ಮಾಡಲು ದಯವಿಟ್ಟು ಅವಕಾಶ ಕೊಡಿ. ಅವರಿಬ್ಬರ ಸಂಭಾಷಣೆ ಮತ್ತು ನಟನೆಯನ್ನು ನೋಡುವುದೇ ಚೆಂದ. ನಾನು ಅಚಿಂತ್ಯಾ ಮತ್ತು ನಿಹಾಲ್ ಹಾಗೂ ಚಿತ್ರಾಲಿಯನ್ನು ನೋಡಲೆಂದೇ ಕಾಯುತ್ತಿರುತ್ತೇನೆ. ಎಲಿಮಿನೇಟ್ ಆದರೂ ಗೆಸ್ಟ್ ರೋಲ್ ಮಾಡಲಿಕ್ಕಾದರೂ ಅವಕಾಶ ಕೊಡಿ ಅಚಿಂತ್ಯ ಇದ್ದರೇನೇ ಆ ಡ್ರಾಮಾ ಜೂನಿಯರ್ಸ್‌ಗೊಂದು ಕಳೆ.

ದಾಕ್ಷಾಯಣಿ ಬಡಿಗೇರ, ಧಾರವಾಡ

## ನಾವಿರೋದೆ ಡ್ರಾಮಾ ನೋಡೋಕೆ

ಡ್ರಾಮಾ... ಉದ್ಘೋಷ 'ನಾವು ಹುಟ್ಟಿರೋದೆ ಡ್ರಾಮಾ ಮಾಡೋಕೇ' ನಿಜವಾಗಲೂ ನೂರಕ್ಕೆ ನೂರು ಅನ್ವರ್ಥಕವಾಗಿದೆ. ಶನಿವಾರ ಮತ್ತು ಭಾನುವಾರ ರಾತ್ರಿ 9 ಗಂಟೆ ಕಾರ್ಯಕ್ರಮ ವೀಕ್ಷಣೆಗೆ ಕುಳಿತರೆ ಆಗೇ ಹೋಯ್ತು. ಇನ್ಯಾವ ವಾಹಿನಿ ಕಡೆಗೂ ನಮ್ಮ ಗಮನ ಹೋಗುವಂತಿಲ್ಲ. ಅಬ್ಬ ಅದೇನು ಪ್ರತಿಭೆ, ಕಣ್ಣಿನಲ್ಲಿ ಹೊಳಪು, ಮುಖಭಾವ, ಅಂಗಾಂಗ ಚಲನೆ! ನಾಟಕ ರಸವನ್ನು ಕುಡಿದು ಹುಟ್ಟಿದ್ದಾರೋ? ಮಿಂದೆದ್ದಿದ್ದಾರೋ ಎನ್ನುವಷ್ಟರ ಮಟ್ಟಿಗೆ ಪಾತ್ರದಲ್ಲಿ ತಾವಾಗುತ್ತಾರೆ.

ಕೆ.ಎಸ್.ಪ್ರಭಾಕರಗುಪ್ತ ಹಾಸನ,

